ಶ್ರೀ ವಿ. ಎಂ. ದೇವ್.-ಅವರು ಹೊಟ್ಟೆ ಹಸಿದುಕೊಂಡಿರುವುದನ್ನು ನೋಡಿದರೆ ನನಗೆ ಬಹಳ...

Sri S. R. KANTHI.—I refute the allegations.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಷ್ಟು ದೊಡ್ಡ ಪ್ರಮಾಣದಲ್ಲಿ ಸಿವಿಲ್ ಮತ್ತು ಮೆಕ್ಯಾನಿಕಲ್ ಪಾಸಾಗಿರತಕ್ಕ ಜನರು ಉದ್ಯೋಗವಿಲ್ಲದೆ ಇರುವುದರಿಂದ ಈ ವಿಚಾರದಲ್ಲಿ ಇದುವರೆಗೆ ಸರ್ಕಾರದ ವರು ಕೈಗೊಂಡಿರುವ ಕ್ರಮಗಳೇನು ಮತ್ತು ಈ ವಿಚಾರದಲ್ಲಿ ಅವರ ಪಾಲಿಸಿ ಏನೆಂಬುದನ್ನು ತಿಳಿಸುತ್ತಾರೆಯೇ?

ಶ್ರೀ ಎಸ್. ಆರ್. ಕಂಠಿ.—ಇದರ ಬಗ್ಗೆ ನಾವು 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಏನು ಮಾಡಬಹುದೋ ಅದನ್ನು ಮಾಡಬೇಕೆಂದಿದ್ದೇವೆ.

State Social Education Council.

*Q.—451. Smt. NAGARATHNAMMA HIREMATH (Gandhinagar).—

Will the Government be pleased to state :—

(*a*) whether it is a fact that they have started an institution by name Social Educatian Council to which the State Adult Education Council has been attached;

(*b*) whether it is a fact that they have amended the constitution of the State Adult Education Council to a large extent without the consent of the General Body of the Adult Education Council;

(*c*) whether it is also a fact that these amendments provide for nomination of all the Officers including the Presidents;

(*d*) whether it is a fact that the Chief Minister has passed orders to the effect that the constitution of the Adult Education Council may be amended in accordance with the wishes of the General Body?

A.—Sri S. R. KANTHI (Minister for Education).—

(*a*) The State Social Education Council has been constituted by Government with effect from 15th June 1959. The Adult Education Council is an independent body and has got representation in the State Social Education Council.

(*b*) A draft of the revised constitution for the Adult Education Council was forwarded to Government for approval. Government suggested some amendments and these were agreed to by the Council. One of the amendments was to give power to Government to amend the Constitution under this power, Government further amended the constitution providing for the nominations of the President and the General Secretary.

(*c*) No. Only the President and the General Secretary were to be nominated by Government.

(*d*) On a representation by some Members, a meeting was convened by the Chief Minister on 4th April 1964. It was contended in that meeting that the President of the Adult Education Council had agreed to the revised constitution without consulting the General Body. The Chief

(SRI S. R. KANTHI)

Minister suggested that a Sub-Committee should examine the constitution and suggest further amendments, if necessary. The Sub-Committee submitted a draft of the revised constitution to the Central Council. The Central Council further amended the draft and sent it to Government for approval. The same is under examination.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಮೈಸೂರು ರಾಜ್ಯದಲ್ಲಿ ಈ ಸ್ಟೇಟ್ ಅಡಲ್ಟ್ ಎಜುಕೇಷನ್ ಕೌನ್ಸಿಲ್ ಸ್ಥಾಪಿತವಾಗಿ ಎಷ್ಟು ವರ್ಷಗಳಾಯಿತು ? ಅದು ಇಲ್ಲಿ ಎಷ್ಟು ದಿವಸಗಳಿಂದ ಕೆಲಸಮಾಡಿಕೊಂಡು ಬರುತ್ತಿದೆ ?

†ಶ್ರೀ ಎಸ್. ಆರ್. ಕಂಠಿ.—ಅದು ಇಲ್ಲಿ ಸ್ಥಾಪಿತವಾಗಿ ಸುಮಾರು 20 ವರ್ಷಗಳ ಮೇಲಾಯಿತು.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಅದು ಇಷ್ಟು ದಿನಗಳತನಕ ಸರಿಯಾಗಿ ಕೆಲಸ ಮಾಡಿಕೊಂಡು ಬರುತ್ತಿದ್ದಾಗ್ಯೂ ಈಗ ಇನ್ನೊಂದು ಹೊಸ ಸೋಷಿಯಲ್ ಎಜುಕೇಷನ್ ಕೌನ್ಸಿಲ್ ಎಂಬುದನ್ನು ಏತಕ್ಕೆ ಪ್ರಾರಂಭ ಮಾಡಬೇಕಾಯಿತು ?

ಶ್ರೀ ಎಸ್. ಆರ್. ಕಂಠಿ.—ಮೊದಲು ಹಳೇಮೈಸೂರು ರಾಜ್ಯವಿದ್ದಾಗ ಅಡಲ್ಟ್ ಎಜುಕೇಷನ್ ಕೌನ್ಸಿಲನ್ನು ಮಾಡಿತ್ತು. ಇತ್ತೀಚೆಗೆ ರಾಜ್ಯ ಹೊಸದಾಗಿ ಆದನಂತರ ಅದಕ್ಕೆ ಇದರ ವ್ಯಾಪ್ತಿ ಇರಲಿಲ್ಲ. 1959 ರಲ್ಲಿ ಹೊಸ ಮೈಸೂರು ರಾಜ್ಯಕ್ಕೆಲ್ಲಾ ಒಂದು ಬೋರ್ಡ್ ಇರಬೇಕೆಂದು ಸೋಷಿಯಲ್ ಎಜುಕೇಷನ್ ಬೋರ್ಡನ್ನು ಮಾಡಲಾಯಿತು ಈಗ ಅದು ಕೆಲಸಮಾಡಿಕೊಂಡು ಬರುತ್ತಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಮಾನ್ಯ ವಿದ್ಯಾಮಂತ್ರಿಗಳು ಸೋಷಿಯಲ್ ಎಜುಕೇಷನ್ ಕೌನ್ಸಿಲ್ ಮಾಟಿಂಗಿನಲ್ಲಿ ಈ ಅಡಲ್ಟ್ ಎಜುಕೇಷನ್ ಕೌನ್ಸಿಲ್ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಇದನ್ನು ಇನ್ನೂ ಮುಂದುವರಿಸಬೇಕೆಂದು ಹೇಳಿದ್ದು ನಿಜವಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಸೋಷಿಯಲ್ ಕೌನ್ಸಿಲ್ಲಿನ ಕೆಲಸವೇ ಬೇರೆ, ಅಡಲ್ಟ್ ಎಜುಕೇಷನ್ ಕೌನ್ಸಿಲ್ಲಿನ ಕೆಲಸವೇ ಬೇರೆ. ಸೋಷಿಯಲ್ ಎಜುಕೇಷನ್ ಕೌನ್ಸಿಲ್ಲಿನ ಕೆಲಸವನ್ನು ಯಾರಿಗೂ ಕೊಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರು ಇದನ್ನು ಸರ್ಕಾರವೇ ನೋಡಿಕೊಳ್ಳಬೇಕೆಂದು ತಿಳಿಸಿದ್ದಾರೆ. ಇದು ಸರ್ಕಾರಕ್ಕೆ ಒಂದು ಉಪದೇಶ ಕೊಡತಕ್ಕ ಬಾಡಿಯಾಗಿದೆ, ಅದರಂತೆ ಅವರು ಸರ್ಕಾರಕ್ಕೆ ಉಪದೇಶ ಕೊಡುತ್ತಿದ್ದಾರೆ.

ಶ್ರೀ ಸಿ. ಆರ್. ರಂಗೇಗೌಡ.—ಈ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರನ್ನು ಮತ್ತು ಗೌರವ ಕಾರ್ಯದರ್ಶಿಗಳನ್ನು ನೇಮಕಮಾಡಿ ಎಷ್ಟು ವರ್ಷಗಳಾಯಿತು ? ಅವರು ಯಾರು.

ಶ್ರೀ ಎಸ್. ಆರ್. ಕಂಠಿ.—ಈಗ ಆ ಪ್ರಶ್ನೆ ನಮ್ಮ ಮುಂದೆ ಇಲ್ಲ. ಇದರ ಅಧ್ಯಕ್ಷರಾಗಿದ್ದ ಶ್ರೀ ಭದ್ರಯ್ಯ ಎನ್ನತಕ್ಕವರು ಪಾಶ್ಚಿಮಾತ್ಯ ರಾಷ್ಟ್ರಕ್ಕೆ ಹೋಗಿದ್ದಾರೆ. ಅವರ ಸ್ಥಾನದಲ್ಲಿ ಬೇರೆಯವರು ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ನಾವು ಕೈ ಹಾಕಿಲ್ಲ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಈಗ ಆ ಅಡಲ್ಟ್ ಎಜುಕೇಷನ್ ಕೌನ್ಸಿಲ್ಲಿನ ಅಧ್ಯಕ್ಷರು ಯಾರು ?

ಶ್ರೀ ಎಸ್. ಆರ್. ಕಂಠಿ.—ಈಗ ಯಾರೂ ಇದ್ದಂತೆ ಕಾಣುವುದಿಲ್ಲ ಬೇಕಾದರೇ ಅವರೇ ನೇಮಕ ಮಾಡಿಕೊಳ್ಳುತ್ತಾರೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಅಲ್ಲಿ ಈಗ ಕೆಲಸಗಾರರು ಕೆಲಸ ಮಾಡುತ್ತಿದ್ದಾರೆ. ನಾಳೆ ಸರ್ಕಾರದವರು ಅದನ್ನು ತೆಗೆದುಕೊಂಡರೆ ಆ ಕೆಲಸಗಾರರ ಗತಿಯೇನು ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರದವರು ಅವರಿಗೆ ನಾನಾ ಕೆಲಸಗಳಿಗಾಗಿ 5 ಲಕ್ಷ ರೂಪಾಯಿಗಳು ಗ್ರಾಂಟನ್ನು ಕೊಡುತ್ತಾರೆ. ಅವರು ಬಂದು ಅದನ್ನು ತೆಗೆದುಕೊಂಡು ಹೋಗಿ ಕೆಲಸ ನಡೆಸುತ್ತಿದ್ದಾರೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಈ ಅಡಲ್ಟ್ ಎಜುಕೇಷನ್ ಮತ್ತು ಸೋಷಿಯಲ್ ಎಜುಕೇಷನ್ ಕೌನ್ಸಿಲ್ಲುಗಳೆರಡರ ಕೆಲಸಗಳೇನು ?

ಶ್ರೀ ಎಸ್. ಆರ್. ಕಂಠಿ.—ಅಡಲ್ಟ್ ಎಜುಕೇಷನ್ ಕೌನ್ಸಿಲ್ಲು ಸರ್ಕಾರದವರೇನು ಕೆಲಸ ಕೊಡುತ್ತಾರೋ ಅದನ್ನು, ಅದು ಮಾಡಬೇಕು. ಆದರೆ ಸೋಷಿಯಲ್ ಎಜುಕೇಷನ್ ಕೌನ್ಸಿರ್ ಸರ್ಕಾರಕ್ಕೆ ಒಂದು ಉಪದೇಶ ಕೊಡತಕ್ಕ ಬಾಡಿಯಾಗಿದೆ. ಅದರಂತೆ ಅದು ಉಪದೇಶ ಕೊಡುತ್ತಿದೆ. ಈಗ ಪಬ್ಲಿಕ್ ಲೈಬ್ರರಿ ಆಕ್ಟ ಆಗಿದೆ. ಆ ಪುಸ್ತಕ ಭಂಡಾರಗಳೂ ನಾಳೆ ಇದರ ವ್ಯಾಪ್ತಿಯಲ್ಲಿ ಬರುತ್ತವೆ. ಇದರ ಅಡಳಿತವನ್ನು ಕೇಂದ್ರ ಸರ್ಕಾರದವರು ನೀವೇ ನೋಡಿಕೊಳ್ಳಬೇಕೆಂದು ಹೇಳಿದ್ದಾರೆ. ಅದರ ಪ್ರಕಾರವೇ ಅದೀಗ ಕೆಲಸಮಾಡುತ್ತಿದೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಕೆಲವು ಕಡೆ ಚುನಾವಣೆಗಳು ನಡೆದು 2-3 ವರ್ಷಗಳಾಗಿದ್ದರೂ ಒಂದು ಸಾರ್ತಿ ಕೂಡ ಮಿಟಿಂಗನ್ನು ಕರೆಯದೇ ಇರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಎಷ್ಟೋ ದೂರುಗಳು ಬಂದಿವೆ. ಅಕೌಂಟುಗಳು ಸರಿಯಾಗಿಲ್ಲ ಎಂಬ ದೂರು ಬಂದಿದೆ. ಫೌಂಡೇಷನ್ನಿನವರು ಕೊಟ್ಟರತಕ್ಕ ಒಂದು ಲಕ್ಷ 25 ಸಾವಿರಕ್ಕೆ ಲೆಕ್ಕ ಗಳಿಲ್ಲ. ನಾವು ಒಬ್ಬ ಅಕೌಂಟೆಂಟನ್ನು ಕೊಟ್ಟಿದ್ದೇವು ಅವರು ಅತನನ್ನು ತೆಗೆದುಹಾಕಿ ಬೇರೆ ಅವರೇ ಒಬ್ಬರನ್ನು ನೇಮಕ ಮಾಡಿದ್ದಾರೆ, ಈ ಎಲ್ಲಾ ಕಾರಣಗಳಿಂದ ಸರ್ಕಾರದ ಒಬ್ಬ ಅಧಿಕಾರಿಯನ್ನು ಇವುಗಳ ಬಗ್ಗೆ ನಿಗಾ ಇಡುವುದಕ್ಕೆ ಇಡಬೇಕಾದ್ದು ಅಗತ್ಯ. ಅಕೌಂಟುಗಳೆಲ್ಲಾ ಸರಿಯಾಗಿವೆಯೇ ಇಲ್ಲವೇ ಎಂಬುದನ್ನು ನೋಡಬೇಕು.

ಶ್ರೀ ಸಿ. ಆರ್. ರಂಗೇಗೌಡ.—ಮೈಸೂರು ವಯಸ್ಕರ ಶಿಕ್ಷಣ ಸಮಿತಿಯ ಕೊನೆಯ ಆಡಿಟ್ ವರದಿಯೊಂದನ್ನು ಈ ಸಭೆಯಮುಂದೆ ಇಡುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ಆರ್. ಕಂಠಿ.—ಆಡಿಟ್ ವರದಿ ಸರ್ಕಾರಕ್ಕೆ ಬಂದ ನಂತರ ತೋರಿಸಲು ನನ್ನ ಅಡ್ಡಿ ಇಲ್ಲ.

Sri C. J. MUCKANNAPPA.—May I know what is the importance that the Government felt to nominate the President and the General Secretary ?

Sri S. R. KANTHI.—At present there is no connection between the Adult Education Council and the Government. The Government is giving a huge sum between Rs. 3.5 lakhs and Rs. 5 lakhs and odd. So, it is very essential that the Government should have full control over the entire thing. Another point that has arisen is that Social Education is going to be part and parcel of the Plan. So long it was in the Budget and now it was going to be part and parcel of the Plan and we feel that it is necessary in order to convince the Government of India that we should have some control over the Adult Education Council.

Sri GANJI VEERAPPA.—If the Government feel that the Adult Education Council is not working satisfactorily and tangible results are not there, why not they think of winding it up and save the money ?

Sri S. R. KANTHI.—We cannot advise the Adult Education Council to wind up because it is an independent body. It is for them to work or wind up. So far as the Government is concerned, Social Education is their responsibility and we are thinking of implementing it and we want to make use of the Adult Education Council to the extent possible.

ಶ್ರೀ ಎಸ್. ಶಿವಪ್ಪ.—ಅಡಲ್ಟ್ ಎಜುಕೇಷನ್ ಮತ್ತು ಸೋಷಿಯಲ್ ಎಜುಕೇಷನ್ ಈ ಎರಡು ಕೌನ್ಸಿಲ್ಲುಗಳ ಮುಖಭೂತ ಸಮಸ್ಯೆ ಒಂದೇ ಆಗಿರುವದರಿಂದ ಈ ಎರಡೂ ಒಂದು ಸಮಸ್ಯೆಯ ಪರಿಹಾರಕ್ಕಾಗೇ ಇರುವುದರಿಂದ ಈಗ 25 ವರ್ಷಗಳ ಕಾಲ ಕೆಲಸಮಾಡಿಕೊಂಡಿರತಕ್ಕ ಅಡಲ್ಟ್ ಎಜುಕೇಷನ್ ಕೌನ್ಸಿಲ್ಲನ್ನು ಸೋಷಿಯಲ್ ಎಜುಕೇಷನ್ ಬಾಡಿಗೆ ಅಧೀನ ಮಾಡಿರುವುದರಿಂದ ಇದರ ಹಕ್ಕುಭಾಧ್ಯತೆಗಳು ಪೊಟಕಾಗುವುದಿಲ್ಲವೇ ? ಕುಂದು ಬರುವುದಿಲ್ಲವೇ ?

Sri S. R. KANTHI.— Sir, it is an incorrect conception on the part of my friend that the Adult Education Council is working under the Social Education Council. It is not a fact. The Adult Education Council is an independent body and Social Education Council is an advisory body to advise Government on policies regarding social education.

Sri G. V. GOWDA.—Sir, any amendment of the Constitution of the Adult Education Council must be according to the desire of the general body and that has to be approved by the proper authority. May I know how the Government could amend the Constitution without the consent of the General Body.?

Sri S. R. KANTHI.—Sir, Government has power to amend the Constitution because the power has been with the Government for a long time. It was also stated in the G.O. issued on 22nd June 1963. According to that order, as social education is going to be a big item under the Plan and the Government of India are also going to help us, we had to take action in order to have some kind of control over the Adult Education Council.

ಶ್ರೀ ಜಿ. ಮಾದಯ್ಯ ಗೌಡ.—ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಗೆ ಸರ್ಕಾರದವರು ಯಥೇಚ್ಛವಾಗಿ ಹಣವನ್ನು ಒದಗಿಸುತ್ತಾ ಇದ್ದಾರೆ. ಅದಕ್ಕೆ ಒಂದು ಅಂಗ ರಚನೆಯೂ ಕೂಡ ಇದೆ. ಸುಮಾರು 5—6 ವರ್ಷಗಳಿಂದ ಆ ಅಂಗ ರಚನೆ ಬಿದ್ದುಹೋಗಿ ಯಾವ ನಿರ್ದಿಷ್ಟವಾದ ನೀತಿಯನ್ನೂ ಅನುಸರಿಸದೇ ಆಡಳಿತ ನಡೆಸುತ್ತಾ ಇರುವಾಗ ಯಾವ ರೀತಿಯಲ್ಲಿ ಸೂಕ್ತವಾದ ಕ್ರಮ ಕೈಕೊಂಡು .....

Mr. SPEAKER.—How involved ! Why should the member criticise ? Let him put the question direct.

Sri C. J. MUCKANNAPPA.—He was President once, Sir.

ಶ್ರೀ ಜಿ. ಮಾದಯ್ಯ ಗೌಡ.—ಹಣಕೊಡುತ್ತಾ ಇರುವಾಗ ಈ ಸಂಸ್ಥೆಯಮೇಲೆ ಅದರ ಕಾರ್ಯಕ್ರಮವನ್ನು ಸರಿಯಾಗಿ ಅನುಸರಿಸುವುದಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಹಿಂದೆ ಮುಖ್ಯಮಂತ್ರಿಗಳು ಯಾವ ರೀತಿ ಇದನ್ನು ಮುಂದೆ ನಡೆಸಬೇಕೆಂಬುದಕ್ಕೂ ಕೂಡ ಒಂದು ಸಲಹೆಯನ್ನು ಇತ್ತಿದ್ದರು. ಅದನ್ನೂ ಕೂಡ ಅನುಸರಿಸದೇ ಇರುವುದಕ್ಕೆ ಏನು ಕಾರಣ ಎಂದು ಕೇಳುತ್ತೇನೆ ?

Sri S. R. KANTHI.—Sir, the present constitution of the Adult Education Council is an independent one. It has nothing to do with the Government. And the Government has always power to amend the Constitution. They send the revised constitution to the Government and Government accepted. They used the power of amending the Constitution because it is very important body whereby we are going to spend lakhs of rupees. Government wanted that the President and Secretary of the Adult Education Council be nominated by the Government. There were certain difficulties in the way and now entire question has come before the Government again. Now there is no difficulty. The jurisdiction of the Adult Education Council has been extended to the entire State. Now the Members coming from the integrated areas have all resigned. Now we have to iron out and put matters in a smooth frame.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—1959ರಿಂದ ಈ ಕೌನ್‌ಸಿಲ್‌ನವರು ಯಾವ ಯಾವ ಸಲಹೆಗಳನ್ನು ಕಳುಹಿಸಿದ್ದಾರೆ ಮತ್ತು ಸರ್ಕಾರದವರು ಯಾವಯಾವುದನ್ನು ಕಾರ್ಯಗತ ಮಾಡಿದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ಬೇರೆ ಒಂದು ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಸಂಜೀವನಾಥ ಐಕಳ.—ಶಿವಾರಗುಡ್ಡ, ನಕರೇಶಪುರ ಮುಂತಾದ ಕಡೆಗಳಲ್ಲಿ ಇರತಕ್ಕ ವಿದ್ಯಾಪೀಠಗಳಮೇಲೆ ಸರ್ಕಾರದವರ ಹತೋಟಿ ಇದೆ. ಇವುಗಳಿಗೆ ಕೊಡುತ್ತಾ ಇರತಕ್ಕ ಹಣ ಸಹಾಯ ಎಷ್ಟು ? ಸಹಾಯ ಮಾಡಿದಂತಹ ಹಣವನ್ನು ಅವರು ಯಾವ ರೀತಿ ಉಪಯೋಗಿಸಿದ್ದಾರೆ ಎಂಬುದರ ಬಗ್ಗೆ ವರದಿ ಏನಾದರೂ ಇದೆಯೇ ?

ಶ್ರೀ ಎಸ್. ಆರ್. ಕಂಠಿ.—ಈ ವಿದ್ಯಾ ಪೀಠಗಳನ್ನು ಅವರೇ ನಡೆಸುತ್ತಾ ಇದ್ದಾರೆ. ಇದಕ್ಕೆ ಫೋರ್ಡ್ ಫೌಂಡೇಷನ್ ಅವರು ದುಡ್ಡು ಕೊಟ್ಟಿದ್ದಾರೆ ನಾವು ಸಹ ಕೊಟ್ಟಿದ್ದೇವೆ. ಆದ್ದರಿಂದ ಅವರು ಯಾವ ರೀತಿ ನಡೆಸುತ್ತಾ ಇದ್ದಾರೆ ಎಂಬುದನ್ನು ಕೇಳುತ್ತಾ ಇದ್ದೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಸಾಮಾನ್ಯವಾಗಿ ಅಕ್ಷರಾಭ್ಯಾಸ ರಾತ್ರಿಯ ಕಾಲದಲ್ಲೇ ಆಗುವುದು. ಅಂತಹ ಕ್ಲಾಸ್‌ಗೆ ರೇವಣ ಸಿದ್ದಪ್ಪನಂಥ ವಯಸ್ಸಿನವರು ಬರುತ್ತಾರೆ, ಅಕ್ಷರಾಭ್ಯಾಸ ಮಾಡುತ್ತಾರೆ. ಆದಕಾರಣದಿಂದ ಈ ಇರಾಖೆಯನ್ನು ತೆಗೆಯುವುದಕ್ಕೆ ಏನಾದರೂ ಸರ್ಕಾರದವರು ಯೋಚನೆ ಮಾಡಿದ್ದೀರಾ ?

Mr. SPEAKER.—Why should the names be brought here ? That is a bad habit. It is not good.

ಶ್ರೀಮಾನ್ ದೇವೇಂದ್ರಪ್ಪನಂಥವರ ವಯಸ್ಸಿನವರು ಅಂತ ಅವರು ಹೇಳಿದರೆ ಅದು ಸರಿ ಹೋಗುತ್ತದೆಯೇ ! ಹೆಸರನ್ನು ಏಕೆ ಹೇಳುತ್ತೀರಿ ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ನಾನು ತಪ್ಪು ಅರ್ಥದಲ್ಲಿ ಹೇಳಲಿಲ್ಲ. ರೇವಣಸಿದ್ದಪ್ಪನಂಥ ವಯಸ್ಸಾಗಿರತಕ್ಕವರು ರಾತ್ರಿ ಕಾಲದಲ್ಲಿ ಆ ಸ್ಕೂಲಿಗೆ ಹೋಗತಕ್ಕ ಅಭ್ಯಾಸ ಇದೆ. ಆದ್ದರಿಂದ ಅದನ್ನು ತೆಗೆಯುವುದು ಸೂಕ್ತವಲ್ಲವೇ ಅಂತ ನನ್ನ ಪ್ರಶ್ನೆ.

ಅಧ್ಯಕ್ಷರು.—ವಯಸ್ಸಿನ ವಿಷಯ ಹೇಳಬೇಕೆಂದರೆ 60—70 ವರ್ಷ ಅಂತ ಹೇಳಿ. ಅವರ ಹೆಸರು ಮತ್ತು ಅವರ ವಯಸ್ಸು ಏಕೆ ಹೇಳುತ್ತಿದ್ದೀರಿ ? ಆ ರೀತಿ ಹೇಳುವುದು ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಸುಮಾರು 60 ವರ್ಷ ವಯಸ್ಸಿಗೆ ಮೇಲ್ಪಟ್ಟು ವಯಸ್ಸಾಗಿರತಕ್ಕವರು ರಾತ್ರಿ ಕಾಲದಲ್ಲಿ ಬಂದು ಅಲ್ಲಿ ಅಕ್ಷರಾಭ್ಯಾಸ ಮಾಡತಕ್ಕ ಪದ್ಧತಿ ಇದೆ. ಆದ್ದರಿಂದ ಆ ಇರಾಖೆಯಲ್ಲಿ ಸಾಕಾದಷ್ಟು ಫಲಕಾರಿಯಾದ ಕೆಲಸವಾಗಿಲ್ಲ ಎಂಬುದನ್ನು ಮನಗಂಡಿದ್ದೇವೆ. ಆದ ಕಾರಣ ಹಣ ಉಳಿತಾಯವಾಗುವ ದೃಷ್ಟಿಯಿಂದ ಆ ಇರಾಖೆಯನ್ನು ತೆಗೆಯುವುದರಲ್ಲಿ ತಮ್ಮ ನಿಲುವು ಏನು, ಧೋರಣೆ ಏನು ?

ಶ್ರೀ ಎಸ್. ಆರ್. ಕಂಠಿ.—ಇದು ಸಾಕ್ಷರತೆಯ ವಿಚಾರ. ಇದನ್ನು ತೆಗೆಯುವುದು ಅಷ್ಟು ಸುಲಭವಾದ ಮಾತಲ್ಲ. ಕೇಂದ್ರ ಸರ್ಕಾರದವರು ಮತ್ತು ಸ್ಟೇಟ್ ಸರ್ಕಾರದವರು ಜೊತೆಯಲ್ಲಿ ಸೇರಿ ಈ ಶಿಕ್ಷಣಕೊಡಬೇಕೆಂದು ಗೊತ್ತುಮಾಡಿದ್ದಾರೆ. ಆದ್ದರಿಂದ ನಾವೇ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈ ಎಳಕುಜನ ಇದ್ದಾರೆಯಲ್ಲಾ ದೇವೇಂದ್ರಪ್ಪನಂಥವರು ಅವರಿಗೆ ಏನು ವ್ಯವಸ್ಥೆ ಮಾಡಿದ್ದೀರಿ ?

(ಸಭೆಯಲ್ಲಿ ನಗು)

Mr. SPEAKER.—It is disallowed.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ನಾನ್ ಆಫೀಷಿಯರ್ ಬಾಡೀಸ್ ನಿರೀಕ್ಷಣೆ ಮಾಡಿದಷ್ಟು ಕೆಲಸ ಮಾಡದೇ ಇರುವುದರಿಂದ, ಫಲ ಕೊಡದೇ ಇರುವುದರಿಂದ ಸರ್ಕಾರದವರು ಈ ಎರಡನ್ನೂ ಎಂದರೆ ಈ ಎರಡು ಸಂಸ್ಥೆಗಳ ಕೆಲಸವನ್ನೂ ಕೂಡ ವಿದ್ಯಾ ಖಾತೆಗೆ ವಹಿಸಿ ತನ್ಮುಖೇನ ಅವರ ಫಲವನ್ನು ಜನಗಳಿಗೆ ಕೊಡುವುದಕ್ಕೆ ಸರ್ಕಾರದವರು ಯೋಚನೆ ಮಾಡುತ್ತಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಈ ಎರಡರಲ್ಲಿ ಒಂದು ಅಡ್ವೈಜರಿ ಬಾಡಿ ಇದೆ. ಆದ್ದರಿಂದ ಆ ಪ್ರಶ್ನೆ ಉಂಟಾಗುವುದಿಲ್ಲ. ಮತ್ತೊಂದು ಅವರು ಹೇಳುತ್ತಾ ಇರುವ ಸೂಚನೆಯನ್ನು ಪರಿಶೀಲನೆ ಮಾಡಿ ನೋಡಬೇಕು.

ಶ್ರೀಮತಿ ಬಿ. ಎಸ್. ಸುಬ್ಬಮ್ಮ.—ವಯಸ್ಕರ ಶಿಕ್ಷಣ ಸಮಿತಿಗೆ ಮೊದಲಿನಿಂದಲೂ ಚುನಾಯಿತ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ಮಂಡಲಿಯವರು ಇರುತ್ತಾ ಇದ್ದರು ಈಗ ಅದನ್ನು ತಿದ್ದುಪಡಿ ಮಾಡಿ ನಾಮಕರಣ ಮಾಡಿರುವುದು ಪ್ರಜಾಪ್ರಭುತ್ವ ನೀತಿಗೆ ಅನುಗುಣವಾಗಿದೆಯೇ ? ಈ ರೀತಿ ಮಾಡಬೇಕೆಂದು ಜನರರ್ ಬಾಡಿ ತೀರ್ಮಾನ ಮಾಡಿತ್ತೇ ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರದ ದುಡ್ಡು ಕೊಡಬೇಕಾದರೆ ಸರ್ಕಾರದವರ ಹತೋಟಿ ಇರಬೇಕಾಗುತ್ತದೆ. ಕೆಲವು ದುಡ್ಡನ್ನು 4ನೇ ಪಂಚವಾರ್ಷಿಕ ಯೋಜನೆಗೆ ಪೂರ್ವಭಾವಿಯಾಗಿ ಕೊಟ್ಟಿದ್ದೇವೆ, ಆದ್ದರಿಂದ ಅದನ್ನು ಖರ್ಚು ಮಾಡಬೇಕಾದರೆ ಸರ್ಕಾರ ಹತೋಟಿ ಇಲ್ಲದೇ ಇದ್ದರೆ ಹೇಗೆ ಆಗುತ್ತದೆ. ಕೇಂದ್ರ ಸರ್ಕಾರದವರ ನೀತಿಗೆ ನಾವು ಬದ್ಧರಾಗಿದ್ದೇವೆ.

ಶ್ರೀ ಜಿ. ಎ. ಗೌಡ.—ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ಮಂಡಲಿಯವರನ್ನು ನೇಮಕ ಮಾಡುವುದರ ಮೂಲಕ ಅವರನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬಹುದೆಂದು ತಮ್ಮ ಅಭಿಪ್ರಾಯವೇ ?

ಶ್ರೀ ಎಸ್. ಆರ್. ಕಂತಿ.— ಕೌದು.

Sri SANJIVANATH KALA.—Is it a act that this Adult Education Council is sending certain trainees to Denmark on a study tour of the problems and these are not actually qualified to go there ?

Sri S. R. KANTHI.—I have no idea about it, Sir.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲೂ ಸಹ ಸೋಷಿಯಲ್ ಎಜ್ಯುಕೇಷನ್ ಸ್ಕೀಂ ಒಂತ ಇದೆ, ಅದಕ್ಕೂ ಇದಕ್ಕೂ ಏನಾದರೂ ಸಂಬಂಧ ಇದೆಯೇ ? ಇವೆರಡನ್ನೂ ಒಟ್ಟುಗೂಡಿಸಬೇಕೆಂದು ಯೋಚನೆ ಮಾಡಿದ್ದೀರಾ ?

ಶ್ರೀ ಎಸ್. ಆರ್. ಕಂತಿ.—ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಇದ್ದಂಥ ಸೋಷಿಯಲ್ ಎಜ್ಯುಕೇಷನ್ ಈಗ ಎಜ್ಯುಕೇಷನ್ ಡಿಪಾರ್ಟ್‌ಮೆಂಟನಲ್ಲಿ ಬಂದಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—(ಡಿ) ಪ್ರಶ್ನೆಗೆ ಉತ್ತರವಾಗಿ ಇದನ್ನು ಪರಿಶೀಲನೆ ಮಾಡಲಾಗುತ್ತಿದೆ ಎಂದು ಹೇಳಿದ್ದೀರಿ. ಎಷ್ಟು ವರ್ಷಗಳ ಕಾಲ ಪರಿಶೀಲನೆ ಮಾಡುತ್ತೀರಿ, ಎಷ್ಟು ಕಾಲ ತಗೆದು ಕೊಳ್ಳುತ್ತದೆ ಎಂಬುದನ್ನು ಹೇಳಬೇಕು.

ಶ್ರೀ ಎಸ್. ಆರ್. ಕಂತಿ.—ಎಷ್ಟು ತೀವ್ರವಾಗಿ ಸಾಧ್ಯವೋ ಅಷ್ಟು ತೀವ್ರವಾಗಿ ಮಾಡುತ್ತೇವೆ.

Sri G. V. GOWDA.—Whether the revised constitution submitted by the Sub-Committee contemplates the Government to have power to amend the Constitution ?

Sri S. R. KANTHI.—Sir, I can only reply by memory, because you had looked into the paper. It has not come to me I have been told that the power to amend the Constitution is kept up They say that the President and Secretary need not be nominated by the Government.

2-00 P.M.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸೋಷಿಯಲ್ ಎಜ್ಯುಕೇಷನ್ ವಿಚಾರವನ್ನು ಪೂರ್ಣವಾಗಿ ಏಕೆ ಸೋಷಿಯಲ್ ವೆಲ್‌ಫೇರ್ ಇಲಾಖೆಗೇ ಏಕಿಸಬಾರದು ?

ಶ್ರೀ ಎಸ್. ಆರ್. ಕಂತಿ.—ಹಾಗೆ ಮಾಡಲು ನನಗೆ ಸಾಧ್ಯವಿಲ್ಲ. ಕೇಂದ್ರ ಸರಕಾರ ಸೋಷಿಯಲ್ ವೆಲ್‌ಫೇರ್ ಇಲಾಖೆ ವಿದ್ಯಾ ಇಲಾಖೆಯಲ್ಲೇ ಇರಬೇಕೆಂದು ನಿರ್ಣಯಮಾಡಿದೆ.

ಶ್ರೀ ನಂಜೀವನಾಥ ಐಕಳ.—ಸ್ಟೇಟ್ ಸೋಷಿಯಲ್ ಎಜ್ಯುಕೇಷನ್ ಕೌನ್ಸಿಲ್ ಪ್ರತ್ಯೇಕವಾಗಿ ಇರಬೇಕಾದ ಅಗತ್ಯವೇನಿದೆ ?

ಶ್ರೀ ಎಸ್. ಆರ್. ಕಂತಿ.—ಸ್ಟೇಟ್ ಎಜ್ಯುಕೇಷನ್ ಕೌನ್ಸಿಲ್ ಮತ್ತು ಅಡಲ್ಟ್ ಎಜ್ಯುಕೇಷನ್ ಕೌನ್ಸಿಲ್ ಇವೆರಡಕ್ಕೂ ಬೇರೆ ಬೇರೆ ಕೆಲಸಗಳಿವೆ, ಅದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲ.

Mr. SPEAKER.—Question hour is over.

QUESTIONS FOR ANSWERS ON THE DAY

(but not taken up)

Procurement of paddy and rice by Government during the year 1964-65.

*Q.—397. Sri A. P. APPANNA (Virajpet).—

Will the Government be pleased to state :—

(a) the total quantity of paddy and rice, Government propose to porcure during the year 1964-65 Harvest season ;